


ಮೊದಲೆಲ್ಲ ಬರೆಯಲು ಕೂತರೆ ಸಾಕು, ಪದಗಳು ತಾವಾಗಿಯೇ ಸಾಲುಗಳಲ್ಲಿ ಸೇರಿಕೊಳ್ಳುತ್ತ ಕವಿತೆಯಾಗಿ ಅವಳಿಗೇ ಅಚ್ಚರಿ ಎನಿಸುತ್ತಿತ್ತು. ಈಗ ಪದಗಳು ನುಣುಚಿಕೊಳ್ಳುತ್ತಿವೆ. ಸಿಕ್ಕ ಪದಗಳಿಗೆ ಅವಳ ಭಾವನೆಗಳನ್ನು ಧ್ವನಿಸುವ ಶಕ್ತಿ ಇಲ್ಲ. ಕ್ಷಣ ಕ್ಷಣಕ್ಕೆ ಬದಲಾಗುವ ಸಂಚಾರಿ ಭಾವಗಳು, ಸುಪ್ತ ಬಯಕೆಗಳನ್ನು ರೂಪಕಗಳ ಮೂಲಕ ಹೇಳುತ್ತ ಕವಿತೆಗೆ ಹೊಸದೊಂದು ಆಯಾಮ ಕೊಡಬೇಕೆಂದು ಹಟ ತೊಟ್ಟು ಬರೆಯಲು ಕೂತಿದ್ದಾಳೆ. ಆದರೆ, ಸಾಧ್ಯವಾಗುತ್ತಿಲ್ಲ. ಇನ್ನು ಕವಿತೆ ಬರೆಯಲು ನನ್ನಿಂದ ಸಾಧ್ಯವಿಲ್ಲ ಅನ್ನಿಸಲು ಶುರುವಾಗಿದೆ.



ಬರೆಯುವುದನ್ನು ನಿಲ್ಲಿಸಿ ಹೊರ ಬಂದು ಬಾಲ್ಕನಿಯಲ್ಲಿ ನಿಂತಳು. ಹತ್ತನೇ ಫ್ಲೋರ್‌ನಿಂದ ನಿಂತು ನೋಡಿದರೆ ಹಗಲು ಹೊತ್ತಲ್ಲಿ ಬರೀ ಕಟ್ಟಡಗಳು, ಮನೆಗಳೇ ಕಾಣುತ್ತವೆ. ರಾತ್ರಿ ಹೊತ್ತಲ್ಲಿ ಬರೀ ದೀಪಗಳು ಮತ್ತು ಅಲ್ಲಲ್ಲಿ ಕತ್ತಲು. ಮನೆಗಳಲ್ಲಿರೊ ಜನ ನಿದ್ದೆಗೆ ಜಾರಿದ್ದಾರೆ. ಏರ್‌ಪೋರ್ಟ್ ರಸ್ತೆಗೆ ಮಾತ್ರ ಬಿಡುವೇ ಇಲ್ಲ. ಎಲ್ಲೆಲ್ಲಿಂದಲೊ ಬಂದವರು, ಇನ್ನೆಲ್ಲಿಗೋ ಹೊರಟವರ ಧಾವಂತದಿಂದಾಗಿ ಇಪ್ಪತ್ನಾಲ್ಕು ಗಂಟೆಗಳೂ ಬ್ಯುಸಿ. ಉಳಿದ ರಸ್ತೆಗಳೆಲ್ಲ ಮಲಗಿವೆ. ಅವು ಏಳೋದು ಬೆಳಗಿನ ಮೂರರ ಅನಂತರವೇ. ಅಷ್ಟರಲ್ಲಿ ಮೊಬೈಲ್ ರಿಂಗ್ ಆಯಿತು. ಇಷ್ಟೊತ್ತಲ್ಲಿ ಇವನ್ಯಾಕೆ ಫೋನ್ ಮಾಡ್ತಿದಾನೆ ಅನ್ನಿಸಿತು. ಎರಡು ರಿಂಗ್ ಅನಂತರ ಡಿಸ್ಕನೆಕ್ಟ್ ಆಯ್ತು. ಒಂದು ನಿಮಿಷ ಬಿಟ್ಟು ಮೆಸೇಜ್ ಅಲರ್ಟ್ ಬಿಪ್. 'ಮೇಡಂ, ಬೆಳಿಗ್ಗೆ 10.30ಕ್ಕೆ ಲಿಟರರಿ ಫೆಸ್ಟ್ ಇದೆ...' ಅವಳ ಕಲೀಗ್ ಜಯದೇವನ ಮೆಸೇಜ್. ಅದನ್ನು ಹೇಳೋಕೆ ಫೋನ್ ಮಾಡಿದ್ದನೇನೊ. ಫೋನ್‌ನ ಮ್ಯೂಟ್ ಮೋಡ್‌ಗೆ ಹಾಕಿ ಒಳಕ್ಕೆ ಬಂದಳು.

ನಮ್ಮ ಕಥಾನಾಯಕಿಯ ಹೆಸರು ತನ್ಮಯಿ. ಅವಳಿಗೀಗ ಮೂವತ್ತೆಂಟು ವರ್ಷ.

ಎಸ್.ವಿ. ಡೀಮ್ಡ್ ಯೂನಿವರ್ಸಿಟಿಯಲ್ಲಿ ಇಂಗ್ಲಿಷ್ ರೀಡರ್. ಅವಳ ಗಂಡ ಅರವಿಂದ ಖಾಸಗಿ ಬ್ಯಾಂಕೊಂದರಲ್ಲಿ ಆಫೀಸರ್. ಆರು ತಿಂಗಳಿಂದ ಅವನು ಬೆಡ್‌ರಿಡನ್. ತನ್ನಿಂದ ಯಾರಿಗೂ ಪ್ರಯೋಜನ ಇಲ್ಲ ಅನ್ನುವ ಭಾವನೆ ಅವನಲ್ಲಿ ಸ್ಥಾಯಿಯಾಗಿದೆ. ತನ್ಮಯಿ ಗಂಡನಿಂದ ಸೆಪರೇಟ್ ಆಗಿದ್ದಾಳೆ ಅಂತ ಅವಳ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲವರು ಸುದ್ದಿ ಹಬ್ಬಿಸಿದ್ದಾರೆ! ಅದು ಅವಳ ಕಿವಿಗೂ ಬಿದ್ದಿದೆ. ಇಂತಹ ವಿಷಯಗಳ ಬಗ್ಗೆ ಅವಳು ನಿರ್ಲಿಪ್ತೆ. ನಿಜ ಗೊತ್ತಾದ ಮೇಲೆ ಅವರಿಗೇ ತಮ್ಮ ಸಣ್ಣತನದ ಅರಿವಾಗುತ್ತೆ ಅಂತ ಸುಮ್ಮನಿದ್ದಾಳೆ. ಈ ದಂಪತಿಯ ಮಗ ವಿಕ್ಕಿ ಊಟಿಯ ಆಂಗ್ಲೋಇಂಡಿಯನ್ ಸ್ಕೂಲಲ್ಲಿ ಓದುತ್ತಿದ್ದಾನೆ.

'ಅರವಿಂದ್, ನಿದ್ದೆ ಬರಲಿಲ್ವ? ಏನು ಯೋಚ್ನೆ ಮಾಡ್ತಿದೀರ? ಎಲ್ಲ ಸರಿಹೋಗುತ್ತೆ ಅಂತ ಡಾಕ್ಟರು ಹೇಳಿದಾರಲ್ಲ. ಈಗ ಮಲಗಿ...' ಅನ್ನುತ್ತ ಅವನ ಹಣೆ, ಕೆನ್ನೆ ನೇವರಿಸಿದಳು. ಬೆರಳು